ದಿನಾಂಕಃ **17.04.2025** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು ಪ್ರತಿವಾದಿ ಮತ್ತು ವಾದಿ ಎಲ್ಲರೂ ವಿ.ಐ.ಎಲ್. ಕಂಪನಿಯ ಉದ್ಯೋಗಿಗಳು ಎಂದರೆ ಸರಿ. ಮೂವರು ಈಗ ನಿವೃತ್ತರಾಗಿದ್ದೇವೆ ಎಂದರೆ ಸರಿ. ಎಲ್ಲ ನೌಕರರಿಗೆ ನಿವೃತ್ತಿಯ ನಂತರ ರೂ.1,500/- ರಿಂದ 2,500/-ರ ಮಧ್ಯದಲ್ಲಿ ನಿವೃತ್ತ ವೇತನ ಬರುತ್ತದೆ ಎಂದರೆ ಸರಿ. ನಾವು ಮೂವರು ಸುಮಾರು 30 ವರ್ಷಗಳಿಂದ ಸ್ನೇಹಿತರು ಎಂದರೆ ಸರಿ. ನಿವೃತ್ತಿಯ ನಂತರ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ಪ್ರತಿವಾದಿ ಕಣ್ವ ಮಾರ್ಕೇಟಿಂಗ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ, ನನಗೆ ಗೊತ್ತಿಲ್ಲ. ನನ್ನ ಹೆಂಡತಿಯ ಹೆಸರು ಸಾವಿತ್ರಮ್ಮ ಎಂದರೆ ಸರಿ. ನನ್ನ ಹೆಂಡತಿ ಪ್ರತಿವಾದಿಯ ಸಲಹೆಯ ಮೇರೆಗೆ ಕಣ್ವ ಮಾರ್ಕೇಟಿಂಗ್ ನಲ್ಲಿ ರೂ.1,50,000/- ತೊಡಗಿಸಿದ್ದರು ಎಂದರೆ ಹೆಣ್ಣು ಮಕ್ಕಳ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಈ ಬಗ್ಗೆ ನಾನು ನನ್ನ ಹೆಂಡತಿಯನ್ನು ವಿಚಾರ ಮಾಡಿಲ್ಲ. ವಾದಿ ಕೂಡ ಕಣ್ವ ಮಾರ್ಕೇಟಿಂಗ್ ನಲ್ಲಿ ಹಣ ತೊಡಗಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿಗೆ ಪ್ರತಿ ತಿಂಗಳು ರೂ.1,500/- ಬಡ್ಡಿ ಸಂದಾಯವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ವಾದಿಗೂ ಕೂಡ ಬಡ್ಡಿ ಸಂದಾಯ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಕಣ್ವ ಮಾರ್ಕೇಟಿಂಗ್ ಕಂಪನಿ ನಂತರದಲ್ಲಿ ದಿವಾಳಿ ಆಯಿತು ಎಂದರೆ, ನನಗೆ ಗೊತ್ತಿಲ್ಲ.

ಹಣ ತೊಡಗಿಸಿದ ವ್ಯಕ್ತಿಗಳಿಗೆ ಮರಳಿ ಸಂದಾಯ ಮಾಡುವಂತೆ ನಿಯೋಗಿಯನ್ನು ಸರ್ಕಾರದಿಂದ ನೇಮಕ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಹಣ ವಾಪಸ್ಸು ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಕೂಡ ಅದೇ ರೀತಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಸಂಗತಿಗಳನ್ನು ವಾದಿ ಬರೆಸಿದ್ದಾರೆ ಎಂದರೆ ಸರಿ. ಯಾವ ಮುಖ ಬೆಲೆಯ ಹಣವನ್ನು ಸಾಲವಾಗಿ ಕೊಡಲಾಗಿತ್ತು ಎಂದು ಹೇಳಲು ಬರುವುದಿಲ್ಲ. ಯಾವ ದಿನಾಂಕದಂದು ಎಂದು ಹೇಳಲು ಬರುವುದಿಲ್ಲ, ಆದರೆ 4 ವರ್ಷಗಳಾಗಿವೆ. ಆ ಸಮಯದಲ್ಲಿ ಪ್ರತಿವಾದಿಯ ಅಂಕಲ್ ಮತ್ತು ನಾನು ಇದ್ದೆವು. ಹಣವನ್ನು ಭದ್ರಾವತಿಯ ಯಾವುದೋ ಒಂದು ಮನೆಯಲ್ಲಿ ಕೊಡಲಾಯಿತು. ಅದು ಯಾವ ಮನೆ, ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ನನ್ನ ಹೆಂಡತಿಗೆ ಕಂಪನಿಯಿಂದ ಬರಬೇಕಾಗಿದ್ದ ಹಣದ ಬಾಬ್ತು ವಾದಿಯನ್ನು ಒತ್ತಾಯ ಪೂರ್ವಕವಾಗಿ ಭದ್ರಾವತಿಯ ನಮ್ಮ ಮನೆಗೆ ಕರೆಸಿಕೊಂಡು ಭದ್ರತೆಗಾಗಿ ಪ್ರೊ ನೋಟುಗಳನ್ನು ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಸಾವಿತ್ರಮ್ಮ ಕೂಡ ಪ್ರತಿವಾದಿ ವಿರುದ್ಧ ಭದ್ರಾವತಿ ನ್ಯಾಯಾಲಯದಲ್ಲಿ ಹಣ ವಸೂಲಿ ದಾವೆ 215/2021 ನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಈ ಪ್ರಕಣವದ ಪ್ರೊ ನೋಟ್ ಕೂಡ ಭದ್ರತೆಗಾಗಿ ಬರೆಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಪ್ರತಿವಾದಿ ಯಾವುದೇ ಹಣವನ್ನು ಪಡೆದುಕೊಂಡಿಲ್ಲ ಮತ್ತು ಯಾವುದೇ ಹಣವನ್ನು ವಾಪಸ್ಸು ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.